# <u>ಕರ್ನಾಟಕ ಲೋಕಾಯುಕ್ತ</u>

**ಕಂಪ್ಲೆಂಟ್/ಉಪಲೋಕ್/ಬಿಜಿಎಂ/2149/2021** ಬಹುಮಹಡಿಗಳ ಕಟ್ಟಡ,
**ಪಿ.ಓ.ಎ.ಆರ್.ಇ-06 (ಮಂಡನಾಧಿಕಾರಿಗಳ ಶಾಖೆ).** ಡಾ: ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 22/02/2022.

## <u>ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ</u>

**<u>ವಿಷಯ:</u> ಶ್ರೀ. ರಮೇಶ ಶಂಕರ ದೇವಗೇರಕರ ಬಿನ್ ಶಂಕರ ದೇವಗೇರಕರ, ಕಚೇರಿ ಅಧೀಕ್ಷಕರು, ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಜಿಲ್ಲೆರವರು ದುರ್ನಡತೆ / ದುರ್ವರ್ತನೆ ತೋರಿದ ಬಗ್ಗೆ.**

****

1. ಬೆಳಗಾವಿ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ರಮೇಶ ಶಂಕರ ದೇವಗೇರಕರ ಬಿನ್ ಶಂಕರ ದೇವಗೇರಕರ, ಕಚೇರಿ ಅಧೀಕ್ಷಕರು, ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ,** ಲೋಕೋಪಯೋಗಿ **ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ದೂರುದಾರರಾದ **ಶ್ರೀ. ಶರಣಬಸಪ್ಪ ಈರಪ್ಪ ಮಡಸನಾಳ, ಪ್ರಥಮ ದರ್ಜೆ ಸಹಾಯಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಉಪವಿಭಾಗ ಕಚೇರಿ, ಖಾನಾಪುರ, ಸದ್ಯ ನಿಯೋಜನೆ ಸುವರ್ಣಸೌಧ ಉಪವಿಭಾಗ, ಬೆಳಗಾವಿ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಅವರ ಕೆಲಸದ ನಿಮಿತ್ತ ಭೇಟಿಮಾಡಿದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಶರಣಬಸಪ್ಪ ಈರಪ್ಪ ಮಡಸನಾಳರವರು** ದಿ: 26/05/1986 ರಂದು ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸಕ್ಕೆ ಸೇರಿದ್ದು, ದಿ: 26/05/2011 ರವರೆಗೂ ಯಾವುದೇ ಮುಂಬಡ್ತಿ ಸಿಗದೆ, ಒಂದೇ ಹುದ್ದೆಯಲ್ಲಿ 25 ವರ್ಷ ಕರ್ತವ್ಯ ನಿರ್ವಹಿಸಿದ್ದು, ಆ ಕಾರಣ, ಮಾನ್ಯ ಕಾರ್ಯನಿರ್ವಾಹಕ

ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ ರವರ ಕಚೇರಿಯ ಆದೇಶದ ಪತ್ರದ ದಿ: 30/01/2017 ರಂದು 25 ವರ್ಷಗಳ ಸೇವೆ ಸಲ್ಲಿಸಿದ್ದರ ಪ್ರಯುಕ್ತ 2ನೇ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿದ್ದು, ಆ ಆದೇಶದಂತೆ ಯಾವುದೇ ಹಣವನ್ನು ದೂರುದಾರರಿಗೆ ಮಂಜೂರು ಮಾಡಿರುವುದಿಲ್ಲ. ದೂರುದಾರರು ಹೃದಯ ಕಾಯಿಲೆಗೆ ಸಂಬಂಧಿಸಿದಂತೆ, ವೈದ್ಯಕೀಯ ಉಪಚಾರ ಪಡೆದು, ವೈದ್ಯಕೀಯ ವೆಚ್ಚ ಮರುಪಾವತಿಸಲು ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ, ಬೆಳಗಾವಿ ವಿಭಾಗ, ಬೆಳಗಾವಿ ರವರಿಗೆ ಅರ್ಜಿ ನೀಡಿದ್ದು, ಆ ಬಿಲ್ ಕೂಡ ಮಂಜೂರು ಆಗಿರುವುದಿಲ್ಲ. ಈ ಮಧ್ಯೆ ಮಾನ್ಯ ಮುಖ್ಯ ಇಂಜಿನಿಯರ್‌ರವರ ಕಚೇರಿ, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು ರವರ ಜ್ಞಾಪನ ಪತ್ರದ ದಿ: 29/09/2018 ರಂದು ದೂರುದಾರರಿಗೆ ವರ್ಗಾವಣೆಯಾಗಿ ಸ್ಥಳ ನಿಯುಕ್ತಿಗೊಳಿಸಿ ಆದೇಶವಾಗಿದ್ದು, ದಿ: 15/10/2018 ರಂದು ಮಾನ್ಯ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲ ಸಾರಿಗೆ, ಬೆಳಗಾವಿ ವಿಭಾಗ, ಬೆಳಗಾವಿರವರಿಗೆ, ದೂರುದಾರರು ತಮಗೆ ಬಾಕಿ ಬರಬೇಕಾದ ಬಡ್ತಿ ಹಣದ ಬಗ್ಗೆ ಮತ್ತು ವೈದ್ಯಕೀಯ ವೆಚ್ಚದ ಮರುಪಾವತಿ ಬಗ್ಗೆ ಅರ್ಜಿ ನೀಡಿದ್ದರೂ ಸಹ ಯಾವುದೇ ಆದೇಶವಾಗಿರುವುದಿಲ್ಲ. ದೂರುದಾರರು ಅವರ ಮೂರು ಕೆಲಸಗಳ ಬಗ್ಗೆ 2-3 ಸಲ ಎದುರುದಾರರನ್ನು ಭೇಟಿಯಾಗಿ ವಿಚಾರಿಸಿದ್ದು, ಎದುರುದಾರರು ದೂರುದಾರರ ಕೆಲಸ ಮಾಡಿಕೊಡಲು ಸ್ವಲ್ಪ ಹಣ ಖರ್ಚು ಮಾಡಬೇಕು, ಹಣವನ್ನು ಮೇಲಾಧಿಕಾರಿಯವರಿಗೆ ಕೊಡಬೇಕು ಎಂದು ತಿಳಿಸಿ, ಮುಂಗಡವಾಗಿ 3,000/- ರೂ. ಹಣವನ್ನು ದೂರುದಾರರು ಶ್ರೀ. ಸಿದ್ರಾಯ ಮುಚ್ಚಂಡಿಯವರ ಮುಖಾಂತರ ಕಳುಹಿಸಿದ್ದನ್ನು, ಎದುರುದಾರರು ಪಡೆದುಕೊಂಡಿರುತ್ತಾರೆ. ದಿ: 04/01/2019 ರಂದು ದೂರುದಾರರು ಅವರ ಮೊಬೈಲ್ ನಂ.88618 34992 ರಿಂದ ಎದುರುದಾರರ ಮೊಬೈಲ್ ನಂ.94490 44744 ಕ್ಕೆ ಕರೆಮಾಡಿ ವಿಚಾರಿಸಿದಾಗ, ಎದುರುದಾರರು 3,000/- ರೂ. ಹಣ ಮುಟ್ಟಿದೆ ಎಂದು ತಿಳಿಸಿರುತ್ತಾರೆ. ಎಲ್ಲಾ ಕೆಲಸಗಳನ್ನು ಮಾಡಿಕೊಡಲು ಎದುರುದಾರರ ಕಚೇರಿಯ ಎಫ್.ಡಿ.ಸಿ. ಸತ್ತಿಗೆರೆ ರವರಿಗೆ 3,000/- ರೂ. ಮತ್ತು ಎದುರುದಾರರಿಗೆ ಇನ್ನೂ 7,000/- ರೂ. ಒಟ್ಟು 10,000/- ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಸದರಿ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ್ದರಿಂದ ದೂರುದಾರರು ದಿ: 05/01/2019 ರಂದು ಬೆಳಗಾವಿ ಭ್ರಷ್ಟಾಚಾರ ನಿಗ್ರಹದಳ ಪೋಲೀಸ್ ಠಾಣೆಯ ಪೋಲೀಸ್ ಉಪಾಧೀಕ್ಷಕರಿಗೆ ಲಿಖಿತ ದೂರನ್ನು ನೀಡಿದ್ದು, ಸದರಿ ಠಾಣೆಯ

ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.01/2019 ರಲ್ಲಿ ಕಲಂ 7, 13 (1) (ಡಿ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 (7 (ಎ)(ಬಿ) ತಿದ್ದುಪಡಿ ಕಾಯ್ದೆ 2018) ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ii) ದಿ: 05/01/2019 ರಂದು ತನಿಖಾಧಿಕಾರಿಗಳು ಇಬ್ಬರು ಪಂಚರನ್ನು ಠಾಣೆಗೆ ಕರೆಯಿಸಿ, ದೂರುದಾರರನ್ನು ಪರಿಚಯಿಸಿ, ಜಪ್ತಿ ಪೂರ್ವದ ಪಂಚನಾಮೆಯ ಸಮಯದಲ್ಲಿ ಪಂಚರಿಗೆ ದೂರಿನ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ ನಂತರ, ದೂರುದಾರರು ಎದುರುದಾರರ ಜೊತೆ ಮಾಡನಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲನ್ನು ತನಿಖಾಧಿಕಾರಿಗೆ ನೀಡಿದ್ದು, ತನಿಖಾಧಿಕಾರಿಯವರು ಆ ಸಂಭಾಷಣೆಯನ್ನು ಪಂಚಸಾಕ್ಷಿದಾರರಿಗೆ ಕೇಳಿಸಿ, ನಂತರ ಸದರಿ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ಲ್ಯಾಪ್‌ಟಾಪ್ ಮೂಲಕ ಡಿ.ವಿ.ಡಿ.ಗೆ ವರ್ಗಾಯಿಸಿ, ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದು, ದೂರುದಾರರು ಎದುರುದಾರರಿಗೆ ಲಂಚದ ಹಣವಾಗಿ ನೀಡಬೇಕಾಗಿರುವ 10,000/- ರೂ.ಗಳನ್ನು (500/- ರೂ. ಮುಖಬೆಲೆಯ 20 ನೋಟು) ಹಾಜರುಪಡಿಸಿದ್ದು, ಸದರಿ ನೋಟುಗಳ ವಿವರಗಳನ್ನು ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿಕೊಂಡ ನಂತರ, ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ತನಿಖಾಧಿಕಾರಿಯವರ ಸೂಚನೆಯಂತೆ ಪಂಚಸಾಕ್ಷಿ-2 ದೂರುದಾರರ ಪ್ಯಾಂಟಿನ ಹಿಂದಿನ ಬಲಗಡೆ ಜೇಬಿನಲ್ಲಿದ್ದ ಪರ್ಸಿನಲ್ಲಿ ಪುಡಿಲೇಪಿತ ನೋಟುಗಳನ್ನು ಇಟ್ಟಿರುತ್ತಾರೆ. ತನಿಖಾಧಿಕಾರಿಯು ದೂರುದಾರರಿಗೆ ಎದುರುದಾರರ ಬಳಿಹೋಗಿ ಕೆಲಸದ ಬಗ್ಗೆ ಕೇಳಬೇಕು ಆಗ ಲಂಚದ ಹಣವನ್ನು ಕೇಳಿದರೆ ಮಾತ್ರ ಪುಡಿಲೇಪಿತ ನೋಟುಗಳನ್ನು ಎದುರುದಾರರಿಗೆ ನೀಡಿ ಅವರಿಗೆ ಅನುಮಾನ ಬಾರದಂತೆ ಮತ್ತು ತನಿಖಾ ತಂಡಕ್ಕೆ ಕಾಣುವಂತೆ ಪ್ಯಾಂಟಿನ ಮುಂದಿನ ಬಲಗಡೆ ಜೇಬಿನಲ್ಲಿರುವ ಕರವಸ್ತ್ರವನ್ನು ತೆಗೆದು ಮುಖ ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ಮತ್ತು ನೆರಳುಸಾಕ್ಷಿಗೆ ದೂರುದಾರರ ಜೊತೆ ಹೋಗಿ ಅಲ್ಲಿ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿರುತ್ತಾರೆ. ಅಲ್ಲದೆ, ತನಿಖಾಧಿಕಾರಿಯವರು ದೂರುದಾರರಿಗೆ ಸೋನಿ ಧ್ವನಿಮುದ್ರಕವನ್ನು ನೀಡಿ, ಎದುರುದಾರರ ಬಳಿ ಹೋಗುವಾಗ ಅದನ್ನು ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ಮತ್ತು ದೂರುದಾರರ ಮತ್ತು ಎದುರುದಾರರ ಮಧ್ಯೆ ನಡೆಯುವ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಳ್ಳಬೇಕೆಂದು ತಿಳಿಸಿ, ಇತರೆ ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

ಅದೇದಿನ ಅಂದರೆ ದಿ: 05/01/2019ರಂದು ದೂರುದಾರರು, ನೆರಳು ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಗಳು ಎದುರುದಾರರ ಕಛೇರಿ ಬಳಿ ಬಂದಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಸಂಜೆ ಸುಮಾರು 4.10 ಗಂಟೆಗೆ ಎದುರುದಾರರ ಕಚೇರಿಯಲ್ಲಿ ಎದುರುದಾರರು ಕುಳಿತುಕೊಳ್ಳುವ ಕ್ಯಾಬಿನ್‌ಗೆ ಬಂದು ನೋಡಿದಾಗ, ಎದುರುದಾರರು ಕ್ಯಾಬಿನ್‌ನಲ್ಲಿ ಇರಲಿಲ್ಲ, ಸುಮಾರು 4.15 ಗಂಟೆಗೆ ಎದುರುದಾರರು ಕ್ಯಾಬಿನ್‌ಗೆ ಬಂದಿದ್ದು, ಆಗ ದೂರುದಾರರು ಅವರ ಕೆಲಸದ ಬಗ್ಗೆ ವಿಚಾರಿಸಿದಾಗ, ಎಲ್ಲಾ ಕೆಲಸ ಮಾಡಿರುವುದಾಗಿ ತಿಳಿಸಿ, ಹಣಕ್ಕೆ ಬೇಡಿಕೆ ಇಟ್ಟಿದ್ದು, ಆಗ ದೂರುದಾರರು ಎದುರುದಾರರು ಬೇಡಿಕೆ ಇಟ್ಟ ಹಣವನ್ನು ನೀಡಿದಾಗ, ಆ ಹಣವನ್ನು ಎದುರುದಾರರು ಬಲಗೈನಿಂದ ಪಡೆದು, ಎಡಗೈನಿಂದ ಅವರ ಪ್ಯಾಂಟಿನ ಹಿಂದುಗಡೆ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ಎದುರುದಾರರ ಕ್ಯಾಬಿನ್‌ನಿಂದ ಹೊರಬಂದು ಅವರ ಕೈವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿದ್ದು, ಆಗ ತನಿಖಾಧಿಕಾರಿಗಳು, ಪಂಚಸಾಕ್ಷಿ ಮತ್ತು ಸಿಬ್ಬಂದಿಗಳೊಂದಿಗೆ ಧಾವಿಸಿ, ದೂರುದಾರರು ತೋರಿಸಿದ ಎದುರುದಾರರನ್ನು ವಶಕ್ಕೆ ಪಡೆದು, ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ. ನಂತರ, ತನಿಖಾಧಿಕಾರಿಯು ಸಿಬ್ಬಂದಿಗಳ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ, ಸದರಿ ದ್ರಾವಣವನ್ನು ಎರಡು ಬಟ್ಟಲುಗಳಲ್ಲಿ ತೆಗೆದುಕೊಂಡು, ಒಂದು ಬಟ್ಟಲಿನ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಅ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಅ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಪ್ರತ್ಯೇಕವಾಗಿ ಆ ದ್ರಾವಣಗಳನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯು ಎದುರುದಾರರಿಗೆ ದೂರುದಾರರಿಂದ ಪಡೆದ ಹಣದ ಬಗ್ಗೆ ವಿಚಾರಿಸಿದಾಗ, ಎದುರುದಾರರು ಅವರ ಪ್ಯಾಂಟಿನ ಹಿಂದುಗಡೆಯ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡಿರುವುದಾಗಿ ತಿಳಿಸಿದ ಮೇರೆಗೆ, ತನಿಖಾಧಿಕಾರಿಯವರು ತೆಗೆದುಕೊಡುವಂತೆ ತಿಳಿಸಿದ್ದು, ಎದುರುದಾರರು ಪಡೆದ ಲಂಚದ ಹಣವನ್ನು ತೆಗೆದು ಟೇಬಲ್ ಮೇಲೆ ಇಟ್ಟಿದ್ದು, ಆ ಹಣವನ್ನು ಪಂಚಸಾಕ್ಷಿ-2ರವರು ಪರಿಶೀಲಿಸಿ ನೋಟುಗಳ ವಿವರಗಳನ್ನು ನೋಡಲಾಗಿ, ಸದರಿ ನೋಟುಗಳ ವಿವರಗಳು ಪಂಚನಾಮೆಯಲ್ಲಿ ಮತ್ತು ಹಾಳೆಯಲ್ಲಿ ನಮೂದಿಸಿದ ನೋಟುಗಳ ವಿವರಗಳಿಗೆ ತಾಳೆಯಾದ್ದರಿಂದ, ಆ ನೋಟುಗಳನ್ನು ವಶಪಡಿಸಿಕೊಂಡು, ತನಿಖಾಧಿಕಾರಿಯು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆಮಾಡಿ, ಎದುರುದಾರರು ಧರಿಸಿದ್ದ ಪ್ಯಾಂಟನ್ನು ಪಡೆದುಕೊಂಡು ಎದುರುದಾರರು ಲಂಚದ ಹಣ ಇಟ್ಟುಕೊಂಡಿದ್ದ ಜೇಬಿನ ಭಾಗವನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆಸಿದಾಗ, ಆ

ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಆ ದ್ರಾವಣವನ್ನು ಮತ್ತು ಪ್ಯಾಂಟನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ದೂರುದಾರರಿಗೆ ನೀಡಿದ ವಾಯ್ಸ್ ರೆಕಾರ್ಡರ್‌ಅನ್ನು ತನಿಖಾಧಿಕಾರಿಗೆ ನೀಡಿದ್ದು, ಅದರಲ್ಲಿ ಎದುರುದಾರರ ಮತ್ತು ದೂರುದಾರರ ನಡುವೆ ನಡೆದ ಸಂಭಾಷಣೆಯು ಧ್ವನಿಮುದ್ರಿತವಾಗಿದ್ದು, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಲ್ಯಾಪ್‌ಟಾಪ್ ಮೂಲಕ ಎರಡು ಡಿ.ವಿ.ಡಿ.ಗಳಿಗೆ ವರ್ಗಾಯಿಸಿ, ಆ ಡಿ.ವಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ.

iii) ತನಿಖಾಧಿಕಾರಿಗಳು ಜಪ್ತಿ ಪಂಚನಾಮೆ ಸಮಯದಲ್ಲಿ ಎದುರುದಾರರ ಬಳಿ ದೊರೆತ ಹಣದ ಬಗ್ಗೆ ವಿಚಾರಿಸಿದಾಗ ಎದುರುದಾರರು ಸಮಜಾಯಿಷಿಯನ್ನು ಬರೆದುಕೊಟ್ಟಿದ್ದು, ಸದರಿ ಸಮಜಾಯಿಷಿಯಲ್ಲಿ ದೂರುದಾರರ "ಎಲ್ಲಾ ಕ್ಲೇಮನ್ನು ಇತ್ಯರ್ಥಪಡಿಸಿದ್ದು, ದೂರುದಾರರು ಫೋನ್ ಮಾಡಿ, ದುಡ್ಡು ಕೊಡುತ್ತೇನೆ ಎಂದು ಹೇಳಿ ಬಲವಂತವಾಗಿ ದುಡ್ಡನ್ನು ಕೈಗೆ ಹಚ್ಚಿ ಪ್ಯಾಂಟಿನ ಎಡಬದಿಯ ಹಿಂದಿನ ಕಿಸೆಯಲ್ಲಿ ತುರುಕಿದರು" ಎಂದು ಸಮಾಜಾಯಿಷಿ ಬರೆದು ಕೊಟ್ಟಿದ್ದು, ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ. ಸದರಿ ಸಮಜಾಯಿಷಿ ತೃಪ್ತಿದಾಯಕವಾದ ಉತ್ತರ ಆಗಿರುವುದಿಲ್ಲ. ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆಯನ್ನು ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯು ಸಾಕ್ಷಿದಾರರ ಹೇಳಿಕೆ, ತನಿಖಾ ದಾಖಲೆಗಳನ್ನು ಮತ್ತು ರಾಸಾಯನಿಕ ತಜ್ಞರ ಪರೀಕ್ಷಾ ವರದಿಯನ್ನು ಹಾಗೂ ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಸದರಿ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣೆಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಕೆಲವು ದಾಖಲೆಗಳನ್ನು ಹಾಜರುಪಡಿಸಿದ್ದು, ಆ ದಾಖಲೆಗಳು ಎದುರುದಾರರನ್ನು ವರ್ಗಾವಣೆ ಮಾಡಿ ಸ್ಥಳ ನಿಯುಕ್ತಿಗೊಳಿಸಿದ ಬಗ್ಗೆ ಇರುವ ದಾಖಲೆಗಳು ಮತ್ತು ಜ್ಞಾಪನ ಪತ್ರಗಳು ಹಾಗೂ ಕಚೇರಿಯ ಆದೇಶಗಳು ಆಗಿರುತ್ತವೆ. ಎದುರುದಾರರ ಸಮಜಾಯಿಷಿಯಲ್ಲಿ ಅವರು ಪ್ರಥಮ ದರ್ಜೆ ಸಹಾಯಕರಾಗಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿ ಲೋ.ಬಂ. ಮತ್ತು ಓ.ಜ.ಸ. ಇಲಾಖೆ ಉಪವಿಭಾಗ ಬೆಳಗಾವಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದಾಗಿ, ನಂತರ ಯಾಂತ್ರಿಕ ಉಪವಿಭಾಗ (ಸಿ.ಎಂ.ಒ.) ಬೆಳಗಾವಿ ಕಚೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವುದನ್ನು ಮತ್ತು ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್, ಇಂಜಿನಿಯರಿಂಗ್ ಉಪವಿಭಾಗ, ರಾಮದುರ್ಗದಲ್ಲಿ ಕೆಲಸ

ನಿರ್ವಹಿಸಿದ್ದಾಗಿ ಸಮಜಾಯಿಷಿಯಲ್ಲಿ ಹೇಳಿರುತ್ತಾರೆ ಮತ್ತು ದೂರುದಾರರು ದ್ವಿ.ದ.ಸ. ಹುದ್ದೆಯಲ್ಲಿ 25 ವರ್ಷಗಳ ಸೇವೆ ಸಲ್ಲಿಸಿದ ಪ್ರಯುಕ್ತ 2ನೇ ಹೆಚ್ಚುವರಿ ವೇತನ ಬಡ್ತಿಯನು ಮಂಜೂರು ಮಾಡುವ ಕುರಿತು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಬಂ. ಮತ್ತು ಓ.ಜ.ಸ. ಇಲಾಖೆ, ಉಪವಿಭಾಗ, ಖಾನಪುರ ಕಚೇರಿಗೆ ಕಳುಹಿಸಿ, ದೂರುದಾರರ ಬಾಕಿವೇತನದ ವ್ಯತ್ಯಾಸದ ಬಿಲ್ಲನ್ನು ಪಾವತಿಸಲು ಆದೇಶಿಸಲಾಗಿದೆ. ವೇತನ ವ್ಯತ್ಯಾಸದ ಸಂದಾಯ ಮಾಡುವ ಪ್ರಕ್ರಿಯೆ ಎದುರುದಾರರ ಕಚೇರಿ ವ್ಯಾಪ್ತಿಗೆ ಬರುವುದಿಲ್ಲವೆಂದು ಮತ್ತು ದೂರುದಾರರು ವ್ಯತ್ಯಾಸದ ಮೊತ್ತವನ್ನು ಪಡೆದಿರುತ್ತಾರೆ. ಹಾಗಿದ್ದರೂ ಸಹ ದುರುದ್ದೇಶದಿಂದ ಆಪಾದನೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ದೂರುದಾರರ ಕೆಲಸ ಬಾಕಿ ಯಾವುದೇ ಉಳಿದಿರುವುದಿಲ್ಲವೆಂದು ಮತ್ತು ಪ್ರಕರಣದಿಂದ ಮುಕ್ತಾಯಗೊಳಿಸಬೇಕೆಂದು ಸಮಜಾಯಿಷಿಯಲ್ಲಿ ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಯು ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಕಂಡುಬಂದಿರುವುದು ರಾಸಾಯನಿಕ ತಜ್ಞರ ವರದಿಯಲ್ಲಿ ಸ್ಪಷ್ಟವಾಗಿರುತ್ತದೆ ಹಾಗೂ ಎದುರುದಾರರ ಧ್ವನಿಪರೀಕ್ಷಾ ವರದಿಯಲ್ಲಿ ಎದುರುದಾರರ ಧ್ವನಿಯು ತಾಳೆಯಾಗಿರುವುದಾಗಿ ಕಂಡುಬಂದಿರುತ್ತದೆ. ಎದುರುದಾರರು ನೀಡಿರುವ ಕಾರಣಗಳು ಈ ಪ್ರಕರಣದಿಂದ ಕೈಬಿಡುವ ಬಗ್ಗೆ ಸಮಂಜಸವಾಗಿರುವುದಿಲ್ಲ ಮತ್ತು ಅವರುಗಳು ಸಲ್ಲಿಸಿದ ಆಕ್ಷೇಪಣೆಯ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ –(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಕಂಪ್ಲೆಂಟ್/ಉಪಲೋಕ್/ಬಿಜಿಎಂ/2149/2021
ಪಿ.ಓ.ಎ.ಆರ್.ಇ–06

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

22/2/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.